ಶ್ರೀ ಐವನ್ ಡಿ'ಸೋಜಾ, ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು ನಿಯಮ-72 ರ ಸೂಚನೆಗೆ ಸರ್ಕಾರದ ಉತ್ತರ.

ಸೂಚನೆ: ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯಲ್ಲಿ 2019-20ನೇ ಸಾಲಿನಲ್ಲಿ ಮಂಜೂರಾದ ಕಾಮಗಾರಿಗಳನ್ನು ಈವರೆಗೂ ಅನುಷ್ಠಾನಗೊಳಿಸದೆ ಇರುವ ಬಗ್ಗೆ ಮತ್ತು ಸಿಬ್ಬಂದಿಗಳ ನಿರ್ಲಕ್ಷತನದಿಂದ ಸರ್ಕಾರದ ಅನುದಾನ ಸದ್ಬಳಕೆ ಆಗದೇ ಇರುವ ಬಗ್ಗೆ ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ರವರು ನಿಯಮ-72ರ ಅಡಿಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆದಿರುವ ಕುರಿತು.

*********

ಉತ್ತರ:

ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯ ಮುಖ್ಯ ಉದ್ದೇಶವು "ಪಶ್ಚಿಮ ಘಟ್ಟ ಪ್ರದೇಶಗಳಿಗೊಳಪಡುವ ಜಿಲ್ಲೆಗಳಲ್ಲಿ ಮಲೆನಾಡು ಪ್ರದೇಶದ ಜೀವಿಶಾಸ್ತ್ರ, ಪರಿಸರ ಸಂರಕ್ಷಣೆ/ಅಭಿವೃದ್ಧಿ, ಪಶ್ಚಿಮ ಘಟ್ಟಗಳ ಸಂರಕ್ಷಣೆ ಮತ್ತು ಅರಣ್ಯೀಕರಣದ ಅಭಿವೃದ್ಧಿ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳು, ಸರ್ವತೋಮುಖ ಅಭಿವೃದ್ಧಿ ನೀರಿನ ಸಂರಕ್ಷಣೆ, ತಡೆಗೋಡೆಗಳ ನಿರ್ಮಾಣ, ರಸ್ತೆ ಅಭಿವೃದ್ಧಿ ಕಾಮಗಾರಿ, ಅಂಗನವಾಡಿ ಶಾಲಾ ಕಟ್ಟಡ, ಶುದ್ಧ ನೀರಿನ ಘಟಕಗಳಂತಹ ಕಾಮಗಾರಿಗಳನ್ನು ಕೈಗೊಳ್ಳುವ ಉದ್ದೇಶ ಹೊಂದಿರುತ್ತದೆ.

ಸರ್ಕಾರದಿಂದ 1993-94 ರಿಂದ 2019-2020ರವರೆಗೆ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಗೆ ಬಿಡುಗಡೆಯಾಗಿರುವ ಅನುದಾನದಲ್ಲಿ ಭರಿಸಿದ ವೆಚ್ಚ ಮತ್ತು ಪೂರ್ಣಗೊಂಡ ಕಾಮಗಾರಿಗಳ ವಿವರ ಈ ಕೆಳಕಂಡಂತಿರುತ್ತದೆ.

| ಕ್ರ ಸಂ | ಅನುದಾನದ ವಿವರ (ರೂ.ಕೋಟಿಗಳಲ್ಲಿ) | | ಕಾಮಗಾರಿಗಳ ವಿವರ (ಸಂಖ್ಯೆಗಳಲ್ಲಿ) | | |
|---|---|---|---|---|---|
| | ಸರ್ಕಾರದಿಂದ ಬಿಡುಗಡೆಯಾದ ಅನುದಾನ | ವೆಚ್ಚ | ಒಟ್ಟು ಕಾಮಗಾರಿಗಳು | ಪೂರ್ಣಗೊಂಡಿರುವ ಕಾಮಗಾರಿಗಳು | ಪ್ರಗತಿಯಲ್ಲಿರುವ ಕಾಮಗಾರಿಗಳು |
| 1 | 689.10 | 678.46 | 26366 | 20479 | 5887 |

ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ ವತಿಯಿಂದ ನಿರ್ವಹಿಸಲಾಗುತ್ತಿರುವ ಎಲ್ಲಾ ಕಾಮಗಾರಿಗಳನ್ನು ಸರ್ಕಾರದ ಅಧೀನದಲ್ಲಿ ಬರುವ ಅನುಷ್ಠಾನ ಇಲಾಖೆಗಳಾದ ಲೋಕೋಪಯೋಗಿ ಇಲಾಖೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೆ.ಆರ್.ಐ.ಡಿ.ಎಲ್. ಹಾಗೂ ನಿರ್ಮಿತಿ ಕೇಂದ್ರಗಳ ಮೂಲಕ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

2019-20ನೇ ಸಾಲಿನಲ್ಲಿ 1527 ಕಾಮಗಾರಿಗಳ ಕ್ರಿಯಾ ಯೋಜನೆಗೆ ಸರ್ಕಾರದಿಂದ ಅನುಮೋದನೆ ನೀಡಿದ್ದು, ಈ ಕಾಮಗಾರಿಗಳ ಅನುಷ್ಠಾನಕ್ಕಾಗಿ ಮಂಡಳಿಯು ನಿಯಮಾನುಸಾರ ಅನುಷ್ಠಾನಗೊಳಿಸುವಂತೆ ಸೂಚನೆ ನೀಡಲಾಗಿರುತ್ತದೆ. ಒಟ್ಟು ಕಾಮಗಾರಿಗಳ ಪೈಕಿ 345 ಮುಂದುವರೆದ ಕಾಮಗಾರಿಗಳಾಗಿರುತ್ತವೆ.

ವಿವರ ಈ ಕೆಳಕಂಡಂತಿರುತ್ತದೆ:-

| ಕ್ರ.ಸಂ. | ಜಿಲ್ಲೆ | ಒಟ್ಟು ಕಾಮಗಾರಿಗಳ ಸಂಖ್ಯೆ | (ರೂ.ಕೋಟಿಗಳಲ್ಲಿ) | | ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ |
|---|---|---|---|---|---|
| | | | ಅಂದಾಜು ಮೊತ್ತ | ಭರಿಸಿದ ವೆಚ್ಚ | |
| 1 | ಬೆಳಗಾವಿ | 38 | 2.29 | 1.02 | 13 |
| 2 | ಚಾಮರಾಜನಗರ | 08 | 1.65 | 0.42 | 00 |
| 3 | ಚಿಕ್ಕಮಗಳೂರು | 51 | 4.99 | 3.68 | 21 |
| 4 | ದಾವಣಗೆರೆ | 04 | 1.97 | 1.90 | 03 |
| 5 | ಧಾರವಾಡ | 09 | 0.42 | 0.08 | 01 |
| 6 | ಹಾಸನ | 24 | 1.05 | 0.68 | 16 |
| 7 | ಹಾವೇರಿ | 26 | 1.79 | 0.42 | 04 |
| 8 | ಕೊಡಗು | 22 | 1.18 | 0.52 | 06 |
| 9 | ಮಂಗಳೂರು | 34 | 1.72 | 0.69 | 12 |
| 10 | ಮೈಸೂರು | 15 | 1.01 | 0.41 | 04 |
| 11 | ಶಿವಮೊಗ್ಗ | 59 | 3.53 | 2.59 | 37 |
| 12 | ಉಡುಪಿ | 17 | 1.02 | 0.22 | 05 |
| 13 | ಉತ್ತರಕನ್ನಡ | 38 | 1.68 | 0.73 | 17 |
| | ಒಟ್ಟು | 345 | 24.29 | 13.35 | 139 |

**2019-20ನೇ ಸಾಲಿನ ಮಂಡಳಿಯ ಹೊಸ ಕಾಮಗಾರಿಗಳ ಆರ್ಥಿಕ ಮತ್ತು ಭೌತಿಕ ಪ್ರಗತಿ**

| ಕ್ರ.ಸಂ. | ಜಿಲ್ಲೆ | ಒಟ್ಟು ಕಾಮಗಾರಿಗಳ ಸಂಖ್ಯೆ | ಆಡಳಿತಾತ್ಮಕ ಅನುಮೋದನೆ ನೀಡಿರುವ ಕಾಮಗಾರಿಗಳ ಸಂಖ್ಯೆ | (ರೂ.ಕೋಟಿಗಳಲ್ಲಿ) | |
|---|---|---|---|---|---|
| | | | | ಅಂದಾಜು ಮೊತ್ತ | ಭರಿಸಿದ ವೆಚ್ಚ |
| 1 | ಬೆಳಗಾವಿ | 115 | 31 | 12.80 | 0.00 |
| 2 | ಚಾಮರಾಜನಗರ | 52 | 52 | 4.08 | 0.38 |
| 3 | ಚಿಕ್ಕಮಗಳೂರು | 76 | 21 | 6.69 | 0.00 |
| 4 | ದಾವಣಗೆರೆ | 40 | 22 | 3.50 | 0.39 |
| 5 | ಧಾರವಾಡ | 65 | 11 | 5.70 | 0.30 |
| 6 | ಹಾಸನ | 102 | 69 | 6.00 | 0.07 |
| 7 | ಹಾವೇರಿ | 54 | 31 | 5.99 | 0.19 |
| 8 | ಕೊಡಗು | 72 | 52 | 3.86 | 0.00 |
| 9 | ಮಂಗಳೂರು | 101 | 10 | 8.65 | 0.00 |
| 10 | ಮೈಸೂರು | 91 | 75 | 6.07 | 0.19 |
| 11 | ಶಿವಮೊಗ್ಗ | 199 | 153 | 23.78 | 9.79 |
| 12 | ಉಡುಪಿ | 126 | 43 | 8.46 | 0.45 |
| 13 | ಉತ್ತರಕನ್ನಡ | 89 | 41 | 6.40 | 0.00 |
| ಒಟ್ಟು | | **1182** | **611** | **101.98** | **11.76** |

ಸರ್ಕಾರದಿಂದ ಕಾಲಕಾಲಕ್ಕೆ ಬಿಡುಗಡೆಯಾಗುವ ಅನುದಾನದ ಲಭ್ಯತೆಗನುಗುಣವಾಗಿ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯು ನಿಯಮಾನುಸಾರ ವಿವಿಧ ಅನುಷ್ಠಾನ ಇಲಾಖೆಗಳಿಂದ ಕಾಮಗಾರಿಗಳನ್ನು ಅನುಷ್ಠಾನಿಸಲಾಗುತ್ತಿದ್ದು, ಕಾಮಗಾರಿಗಳನ್ನು ನಿಗದಿಪಡಿಸಿರುವ ಕಾಲಮಿತಿಯೊಳಗೆ ಅನುಷ್ಠಾನಗೊಳಿಸಲು ಕ್ರಮ ವಹಿಸಲಾಗುವುದು.

ಸಂಖ್ಯೆ:ಪಿಡಿಎಸ್ 25 ಪಿಟಿಪಿ 2020

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ